4. ''ಪ್ರಕಟಣೆ''

ಟೇರ್ಮನ್: ಕರ್ನಾಟಕ ಜನತಾದಳ (ಜಾತ್ಯಾತೀತ) ಪಕ್ಷದ ಅಧ್ಯಕ್ಷರು ದಿನಾಂಕ 22.04.2000ದಂದು ನೀಡಿರುವ ಪತ್ರದ ಪ್ರಕಾರ ವಿಧಾನಸಭೆಯಲ್ಲಿ ಜನತಾದಳ (ಜಾತ್ಯಾತೀತ)ಶಾಸಕಾಂಗ ಪಕ್ಷದ ನಾಯಕರಾಗಿ ಶ್ರೀ ಸಿ.ಚೆನ್ನಿಗಪ್ಪ ಅವರನ್ನು, ಉಪನಾಯಕರನ್ನಾಗಿ, ಶ್ರೀ ಕೆ.ಎಂ.ಕೃಷ್ಣಮೂರ್ತಿ ಅವರನ್ನು ಹಾಗೂ ಶ್ರೀ ಸಿ.ಬಿ.ಸುರೇಶ್ ಬಾಬು ಅವರನ್ನು ಸಚೇತಕರನ್ನಾಗಿಯೂ ಪರಿಗಣಿಸಲಾಗಿದೆ.

ಇವತ್ತಿನ ಕಲಾಪವನ್ನು ಇಷ್ಟಕ್ಕೆ ಮುಗಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಮುಂದುವರಿಸೋಣ ಎಂದರೆ ಈಗಲೂ ಸಿದ್ಧ ಇದ್ದೇವೆ. ನಾಳೆ ಮುಂಜಾನೆ ಕೂರೋಣ ಎಂದರು ಕೂರುತ್ತೇವೆ. ಅದು ನಿಮಗೆ ಬಿಟ್ಟಿದ್ದು.

ಛೇರ್ಮನ್: ಎಲ್ಲರೂ ತಯಾರಿದ್ದರೆ ಉತ್ತರ ಕೊಡಬಹುದು ಅಷ್ಟೇ. ಸಭೆಯ ಒಟ್ಟಾರೆ ಅಭಿಪ್ರಾಯ ನಾಳೆ ತೆಗೆದುಕೊಳ್ಳುವುದು ಎನ್ನುವ ಪರಿಸ್ಥಿತಿ ಇದೆ. ಅದಕ್ಕಾಗಿ ಇವತ್ತಿನ ಕಲಾಪ ಇಲ್ಲಿಗೆ ಮುಕ್ತಾಯವಾಯಿತು. ನಾಳೆ ಮತ್ತೆ 11 ಗಂಟೆಗೆ ಸಭೆ ಸೇರುತ್ತದೆ.

(ಸದನವು ರಾತ್ರಿ 7.57ಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 26.04.2000ರ ಬುಧವಾರ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)